# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 264 |
| 02. | ವಿಧಾನ ಪರಿಷತ್ತಿನ ಸದಸ್ಯರ ಹೆಸರು | : ಶ್ರೀ ಎಸ್.ರವಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 03. | ಉತ್ತರಿಸುವ ದಿನಾಂಕ | : 15.02.2024 |
| 04. | ಉತ್ತರಿಸುವ ಸಚಿವರು. | : ಗೃಹ ಸಚಿವರು. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 3 ವರ್ಷಗಳಲ್ಲಿ ಇಂಟರ್‌ನೆಟ್/ಮೊಬೈಲ್ ಫೋನ್/ಆನ್‌ಲೈನ್ ಬಳಸಿ ಹಣ ವಂಚನೆ ಮಾಡುವ (ಸೈಬರ್ ಕ್ರೈಂ) ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ; ಈ ಪೈಕಿ ಎಷ್ಟು ಪ್ರಕರಣಗಳಿಗೆ ಕೇಸ್ ದಾಖಲಿಸಲಾಗಿದೆ; ಎಷ್ಟು ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ; ಈ ಮೂಲಕ ಎಷ್ಟು ಹಣ ವಂಚಿಸಲಾಗಿದೆ (ವರ್ಷವಾರು ವಿವರ ನೀಡುವುದು)</td><td>ಕಳೆದ 3 ವರ್ಷಗಳಲ್ಲಿ ಇಂಟರ್‌ನೆಟ್/ಮೊಬೈಲ್ ಫೋನ್/ಆನ್‌ಲೈನ್ ಬಳಸಿ ಹಣ ವಂಚನೆ (ಸೈಬರ್‌ಕ್ರೈಂ) ವರದಿಯ ಮೇರೆಗೆ ದಾಖಲಿಸಿರುವ ಪ್ರಕರಣಗಳು, ಇತ್ಯರ್ಥಪಡಿಸಲಾಗಿರುವ ಪ್ರಕರಣಗಳು ಮತ್ತು ವಂಚಿಸಲಾಗಿರುವ ಹಣದ ವರ್ಷವಾರು ವಿವರಗಳು ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ಇಂಟರ್‌ನೆಟ್/ ಮೊಬೈಲ್ ಫೋನ್/ ಆನ್‌ಲೈನ್ ಬಳಸಿ ಹಣ ವಂಚನೆ ಕುರಿತು ದಾಖಲಿಸಿರುವ ಪ್ರಕರಣಗಳ ಸಂಖ್ಯೆ</th><th>ಇಂಟರ್‌ನೆಟ್/ ಮೊಬೈಲ್ ಫೋನ್ /ಆನ್‌ಲೈನ್ ಬಳಸಿ ವಂಚಿಸಿರುವ ಹಣದ ಮೊತ್ತ</th><th>ಇತ್ಯರ್ಥ ಪಡಿಸಲಾದ ಪ್ರಕರಣಗಳ ಸಂಖ್ಯೆ</th><th>ಬಂಧಿಸಲ್ಪಟ್ಟವರ ಸಂಖ್ಯೆ</th></tr>
<tr><td>2021</td><td>8000</td><td>141,90,06,777</td><td>2919</td><td>285</td></tr>
<tr><td>2022</td><td>12868</td><td>355,17,82,770</td><td>4100</td><td>521</td></tr>
<tr><td>2023</td><td>6692</td><td>737,00,87,250</td><td>3291</td><td>563</td></tr>
</table></td></tr>
<tr><td>ಆ)</td><td>ರಾಜ್ಯದಲ್ಲಿ ಇಂಟರ್‌ನೆಟ್ /ಮೊಬೈಲ್ ಪೋನ್/ಆನ್‌ಲೈನ್ ಮೂಲಕ ವಂಚಣೆಗೊಳಗಾಗುತ್ತಿರುವವರ ಸಂಖ್ಯೆ ಪ್ರತಿದಿನ ಏರಿಕೆಯಾಗುತ್ತಿದ್ದು, ಇದಕ್ಕೆ ಅನುಸಾರವಾಗಿ ಸೈಬರ್‌ಕ್ರೈಂ ಕೇಸ್‌ಗಳನ್ನು ಇತ್ಯರ್ಥಪಡಿಸಲು ಪ್ರತ್ಯೇಕ ಸಿಬ್ಬಂದಿಗಳನ್ನು ನೇಮಿಸಲಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ಪೊಲೀಸ್ ಠಾಣೆಗಳನ್ನು ಮತ್ತು ಸಿಬ್ಬಂದಿಗಳನ್ನು</td><td>ಸಾರ್ವಜನಿಕರು ಇಂಟರ್‌ನೆಟ್/ಮೊಬೈಲ್ ಫೋನ್/ಆನ್‌ಲೈನ್ ಮೂಲಕ ವಂಚನೆಗೊಳಗಾಗುತ್ತಿರುವ ಪ್ರಕರಣಗಳನ್ನು ದಾಖಲಿಸಿಕೊಳ್ಳಲು ಹಾಗೂ ಸಮರ್ಥವಾಗಿ ತನಿಖೆಯನ್ನು ನಿರ್ವಹಿಸಲು ಬೆಂಗಳೂರು ನಗರದ ಎಲ್ಲಾ 8 ವಿಭಾಗದಲ್ಲಿಯೂ CEN ಪೊಲೀಸ್ ಠಾಣೆಗಳು ಒಳಗೊಂಡಂತೆ ರಾಜ್ಯಾದ್ಯಾಂತ ಒಟ್ಟು 43 ಸೈಬರ್, ಎಕಾನಾಮಿಕ್ ಮತ್ತು ನಾರ್ಕೋಟಿಕ್(CEN-POLICE STATION) ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗಿರುತ್ತದೆ.<br>ಈ ಸೈಬರ್ ಪೊಲೀಸ್ ಠಾಣೆಗಳಲ್ಲಿ ತನಿಖೆಯನ್ನು ತಾಂತ್ರಿಕವಾಗಿ ಆಧುನಿಕ ತಂತ್ರಾಂಶಗಳನ್ನು ಬಳಿಸಿ ನಿರ್ವಹಿಸಲು ಹಾಗೂ ಪ್ರಕರಣಗಳನ್ನು ಇತ್ಯರ್ಥಪಡಿಸಲು ನುರಿತ/ತರಬೇತಿ ಹೊಂದಿದ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳನ್ನು ನೇಮಿಸಲಾಗಿದೆ.<br>ಮುಂದುವರೆದಂತೆ, ಇಂತಹ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥ ಪಡಿಸಲು ರಾಜ್ಯದ ಕಾನೂನು ಸುವ್ಯವಸ್ಥೆ ಪೊಲೀಸ್ ಠಾಣೆಗಳಲ್ಲಿಯೂ</td></tr>
</table>

| | | |
|---|---|---|
| | ನೇಮಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು) | ಕೂಡ ಪ್ರಕರಣಗಳನ್ನು ದಾಖಲಿಸಿಕೊಂಡು ತಜ್ಞರ ಮಾರ್ಗದರ್ಶನದಲ್ಲಿ ತನಿಖೆ ಕೈಗೊಳ್ಳಲು ಕ್ರಮವಹಿಸಲಾಗಿರುತ್ತದೆ. |
| ಇ) | ಸೈಬರ್‌ಕ್ರೈಂ ಕೇಸ್‌ಗಳನ್ನು ಇತ್ಯರ್ಥಪಡಿಸಲು ಸಿಬ್ಬಂದಿಗಳಿಗೆ ಬೇಕಾದ ಅಧ್ಯುನಿಕ ತಂತ್ರಜ್ಞಾನದ ಪರಿಕರಗಳು ಮತ್ತು ತರಬೇತಿಯ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಮಸ್ಯೆಗಳನ್ನು ಪರಿಹರಿಸಲು ಕೈಗೊಂಡಿರುವ ಕ್ರಮಗಳೇನು(ವಿವರ ನೀಡುವುದು) | ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸೈಬರ್ ಅಪರಾಧಗಳ ತನಿಖೆಯನ್ನು ತಾಂತ್ರಿಕವಾಗಿ ನಿರ್ವಹಿಸಲು ಅವಶ್ಯವಿರುವ ತಂತ್ರಾಂಶ ಮತ್ತು ತಂತ್ರಜ್ಞಾನದ ಉಪಕರಣಗಳನ್ನು ಒದಗಿಸಲಾಗಿದೆ. ತಾಂತ್ರಿಕ ತಜ್ಞರಿಂದ ಕಾಲಕಾಲಕ್ಕೆ ತರಬೇತಿಯನ್ನು ನೀಡುವ ಬಗ್ಗೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>❖ ಸೈಬರ್ ಪ್ರಕರಣಗಳ ಇತ್ಯರ್ಥಪಡಿಸಲು ಅಧುನಿಕ ತಂತ್ರಾಜ್ಞಾನ ಹೊಂದಿರುವ ಉಪಕರಣಗಳನ್ನು ಬಳಸಲಾಗುತ್ತಿದೆ. ಈ ತಾಂತ್ರಿಕ ಉಪಕರಣಗಳನ್ನು ಬಳಸಲು ಸಿಬ್ಬಂದಿಗಳಿಗೆ ವಿಶೇಷ ತರಬೇತಿಯನ್ನು ಒದಗಿಸಲಾಗಿರುತ್ತದೆ.<br>❖ ಸಿಐಡಿ ಘಟಕದಲ್ಲಿ ಸೈಬರ್ ಫಾರೇನ್ಸಿಕ್ ಯುನಿಟ್ (ಸಿಎಫ್.ಯು) ವಿಭಾಗವನ್ನು ಹಿರಿಯ ಅಧಿಕಾರಿಗಳ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ವಿಭಾಗವು ಆಧುನಿಕ ತಂತ್ರಜ್ಞಾನ ಸಲಕರಣೆಗಳನ್ನು ಬಳಸಿಕೊಂಡು ರಾಜ್ಯದಲ್ಲಿ ಕಾರ್ಯನಿರ್ವಹಿಸುವ ಪೊಲೀಸ್ ಠಾಣೆಗಳ ಪ್ರಕರಣಗಳಲ್ಲಿನ ತನಿಖೆಯಲ್ಲಿನ ತಾಂತ್ರಿಕ ಸಹಾಯವನ್ನು ಒದಗಿಸಲಾಗುತ್ತಿದೆ.<br>❖ Centre for Cybercrime Investigation Training & Research (CCITR) ವಿಭಾಗವನ್ನು ಸಿಐಡಿ ಘಟಕದಲ್ಲಿ ಸ್ಥಾಪಿಸಲಾಗಿದ್ದು, ಸೈಬರ್ ಅಪರಾಧಗಳ ತರಬೇತಿ ಮತ್ತು ಸಂಶೋಧನಾ ವಿಭಾಗವಾಗಿ ಕಾರ್ಯ ನಿರ್ವಹಿಸುತ್ತಿರುತ್ತದೆ. |

**HD/1/PCQ/2024**

**(ಡಾ: ಜಿ. ಪರಮೇಶ್ವರ)**
ಗೃಹ ಸಚಿವರು